# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1096 (ಗ್ರಾಮೀಣಾಭಿವೃದ್ಧಿ & ಪಂ.ರಾಜ್ ಇಲಾಖೆಯಿಂದ ವರ್ಗಾವಣೆಯಗೊಂಡಿರುವ) |
| ಸದಸ್ಯರ ಹೆಸರು | ಶ್ರೀಹೆಚ್.ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ: | 15.12.2023 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | 2016 ರಲ್ಲಿ ಸರ್ಕಾರವು ಈ ಹಿಂದೆ ಗ್ರಾಮ ಪಂಚಾಯತಿ ವ್ಯಾಪ್ತಿಯ ಗ್ರಾಮಗಳ ಗ್ರಾಮ ಠಾಣ ಗಡಿ ನಿಗಧಿಪಡಿಸಿದ್ದು, ಮೂಲ ಗ್ರಾಮ ಠಾಣದ ಜೊತೆಗೆ ಹೊಂದಿಕೊಂಡಂತೆ ಪ್ರಸ್ತುತ ವಿಸ್ತರಣೆಯಾಗಿರುವ ಪ್ರದೇಶ ಒಳಗೊಂಡಂತೆ ಹೊಸದಾಗಿ ಸರ್ವೆ ಮಾಡಲು ಸರ್ಕಾರ ಆದೇಶಿಸಿದ್ದು, ಈವರೆಗೂ ಸರ್ಕಾರ ಯಾವುದೇ ಕ್ರಮವನ್ನು ವಹಿಸಿಲ್ಲದಿರುವ ಬಗ್ಗೆ ಸಂಪೂರ್ಣ ವಿವರಗಳನ್ನು ನೀಡುವುದು; | ಗ್ರಾಮಠಾಣಾ ಗಡಿ ವಿಸ್ತರಣೆ ಬಾಬ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ನಡವಳಿಯ ನಂತರ ಪ್ರಸ್ತಾವನೆ ಸ್ವೀಕೃತವಾದಲ್ಲಿ ಸುತ್ತೋಲೆ ನಂ.ಗ್ರಾಅಪಂ/341 /ಗ್ರಾಪಂಅ/2016(ಭಾಗ-3) ದಿನಾಂಕ: 28-10-2016 ರನ್ವಯ ಭೂಮಾಪನ ಇಲಾಖೆಯಿಂದ ಗ್ರಾಮಗಳ ಗ್ರಾಮ ಠಾಣಾ ಗಡಿಯನ್ನು ವಿಸ್ತರಣೆ / ಪುನರ್ ನಿಗಧಿ ಮಾಡುವ ಬಗ್ಗೆ ನಿಯಮಾನುಸಾರ ಅಳತೆ ಕ್ರಮ ಕೈಗೊಂಡು ಪೂರಕ ಮಾಹಿತಿಯೊಂದಿಗೆ ಕಡತವನ್ನು ಸಂಬಂದಿಸಿದ ಪ್ರಾಧಿಕಾರಕ್ಕೆ ಅಗತ್ಯ ಕ್ರಮಕ್ಕಾಗಿ ಕಳುಹಿಸಲಾಗುತ್ತಿದೆ.<br><br>ಅದರಂತೆ ರಾಜ್ಯದಲ್ಲಿ ಸ್ವೀಕೃತವಾಗಿರುವ 104 ಪ್ರಸ್ತಾವನೆಗಳ ಪೈಕಿ 97 ಗ್ರಾಮಗಳ ಗ್ರಾಮ ಠಾಣಾ ಗಡಿಯನ್ನು ವಿಸ್ತರಣೆ / ಪುನರ್ ನಿಗಧಿ ಮಾಡುವ ಬಗ್ಗೆ ಅಳತೆ ಕ್ರಮ ಕೈಗೊಂಡು ವರದಿ ಸಲ್ಲಿಸಲಾಗಿದೆ. ವಿವರವನ್ನು **ಅನುಬಂಧ-1 ರಲ್ಲಿ** ನೀಡಿದೆ. |
| ಆ) | ಗ್ರಾಮ ಠಾಣದ ಅಕ್ಕ ಪಕ್ಕದಲ್ಲಿ ವಿವಿಧ ವಸತಿ ಯೋಜನೆಗಳಡಿ ಹಕ್ಕು ಪತ್ರ ವಿತರಿಸಿ ಮನೆ ನಿರ್ಮಾಣ ಮಾಡಿ ಕೊಂಡಿದ್ದಲ್ಲದೇ ಕೃಷಿ ಭೂಮಿಯಲ್ಲಿ ಮನೆಗಳನ್ನು ನಿರ್ಮಾಣ ಮಾಡಿ ಕೊಂಡಿದ್ದು, ಗ್ರಾಮ ಠಾಣ ವ್ಯಾಪ್ತಿಗೆ ಒಳ ಪಡಿಸದಿರುವುದರಿಂದ ನಾಗರೀಕರ ಆಸ್ತಿಗಳಿಗೆ ಗ್ರಾಮ ಪಂಚಾಯತಿಗಳಿಂದ ನಮೂನೆ 9 ಮತ್ತು11ಎ ಪಡೆಯಲು ತುಂಬಾ ಅನಾನುಕೂಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರವು ಯಾವ ರೀತಿ ಕ್ರಮ ಕೈ ಗೊಂಡಿದೆ; | ಪ್ರಸ್ತುತ ಇರುವ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮ ಠಾಣಾದ ಜೊತೆಗೆ ಗ್ರಾಮ ಠಾಣಾಕ್ಕೆ ಹೊಂದಿಕೊಂಡಂತೆ ಗ್ರಾಮಗಳ ಬೆಳವಣಿಗೆಯಾಗಿರುತ್ತವೆ. ಈ ಪ್ರದೇಶಗಳು ಗ್ರಾಮಠಾಣಾ ವ್ಯಾಪ್ತಿಗೆ ಒಳಪಡದಿರುವುದರಿಂದ ನಾಗರೀಕರು ಆಸ್ತಿಗಳಿಗೆ ಸಂಬಂಧಿಸಿದಂತೆ ಗ್ರಾಮ ಪಂಚಾಯತಿಗಳಿಂದ ನಮೂನೆ 9 ಮತ್ತು 11ಎ ಪಡೆಯಲು ಅನಾನುಕೂಲವಾಗಿರುವುದು ಗಮನಕ್ಕೆ ಬಂದ ಹಿನ್ನೆಲೆಯಲ್ಲಿ ಪ್ರಸ್ತುತ ವಿಸ್ತರಣೆಯಾಗಿರುವ ಪ್ರದೇಶ ಒಳಗೊಂಡಂತೆ ಹೊಸದಾಗಿ ಸರ್ವೆ ಮಾಡಿಸಿ ಗ್ರಾಮಠಾಣಾವನ್ನು ಪುನರ್ ನಿಗದಿಪಡಿಸುವ ಬಗ್ಗೆ ಕಂದಾಯ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಜಂಟಿಯಾಗಿ ದಿನಾಂಕ: 28.10.2016 ರಂದು ಸುತ್ತೋಲೆ ಹೊರಡಿಸಲಾಗಿದೆ. |

| | | |
|---|---|---|
| | | ಸದರಿ ಸುತ್ತೋಲೆಯಲ್ಲಿ ಗ್ರಾಮಠಾಣಾ ವಿಸ್ತರಣೆ ಬಗ್ಗೆ ಪ್ರಸ್ತಾವನೆಯನ್ನು ಪರಿಶೀಲಿಸಿ ಸೂಕ್ತ ಆದೇಶ ಹೊರಡಿಸಲು ಆಯಾ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ.<br><br>ವಿವಿಧ ವಸತಿ ಯೋಜನೆಗಳಡಿ ಹಕ್ಕುಪತ್ರ ವಿತರಿಸಿರುವ ಪ್ರಕರಣಗಳಲ್ಲಿ ಆಸ್ತಿಯ ಮಾಲೀಕರಿಗೆ ನಮೂನೆ-9 ಮತ್ತು 11ಎ ನೀಡಲಾಗುತ್ತಿದೆ.<br>ಸರ್ಕಾರದ ಸುತ್ತೋಲೆ ಸಂಖ್ಯೆ:ಗ್ರಾಅಪ 83 ಗ್ರಾಪಂಅ 2013 (ಭಾಗ-6) ದಿನಾಂಕ:03.02.2014 ರಲ್ಲಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕ್ರಮಬದ್ಧವಲ್ಲದ ಆಸ್ತಿಗಳಿಗೆ ನಮೂನೆ-11ಬಿ ಅನ್ನು ಇ-ಸ್ವತ್ತು ತಂತ್ರಾಂಶದ ಮೂಲಕ ನೀಡಲು ಮಾರ್ಗಸೂಚಿಗಳನ್ನು ನೀಡಲಾಗಿದ್ದು, ಅದರಂತೆ ದಿನಾಂಕ:14.06.2013 ರ ಪೂರ್ವದಲ್ಲಿ ಕಟ್ಟಡ ನಿರ್ಮಾಣ ಮಾಡಿಕೊಂಡಿದ್ದಲ್ಲಿ ಈ ದಿನಾಂಕಕ್ಕಿಂತ ಮುಂಚಿನ 6 ತಿಂಗಳ ವಿದ್ಯುಚ್ಛಕ್ತಿ ಬಿಲ್ಲನ್ನು ಪಡೆದು ಇ-ಸ್ವತ್ತು ತಂತ್ರಾಂಶದ ಮೂಲಕ ತೆರಿಗೆ ನಿರ್ಧರಣೆ ಪಟ್ಟಿ (ನಮೂನೆ-11ಬಿ) ನೀಡಲಾಗುತ್ತಿದೆ. |
| ಇ) | ಎಷ್ಟೋ ಹಳ್ಳಿಗಳಲ್ಲಿ 1990 ರ ಅಥವಾ ಹಿಂದಿನ ಸಾಲಿನ ಮನೆಗಳಿಗೆ/ ಆಸ್ತಿಗಳಿಗೆ ಸಂಬಂಧಿಸಿದ ಯಾವುದೇ ಅಧಿಕೃತ ದಾಖಲೆ ಇಲ್ಲದೆ ಜನರು ಪರದಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಯಾವ ರೀತಿಯ ಕ್ರಮ ಕೈಗೊಂಡಿದೆ? | ಬಂದಿದೆ.<br>ನಮೂನೆ-9, 11ಎ ಹಾಗೂ 11ಬಿ ವಿತರಿಸುವುದು ಸಕಾಲ ಸೇವೆಯ ಕಾರ್ಯ ವ್ಯಾಪ್ತಿಗೆ ಸೇರ್ಪಟ್ಟಿದ್ದು 45 ದಿನಗಳೊಳಗೆ ಅರ್ಜಿದಾರರು ನಿಯಮಗಳ ಪ್ರಕಾರ ಎಲ್ಲಾ ದಾಖಲಾತಿಗಳನ್ನು ಅವರು ಒದಗಿಸಿದ್ದಲ್ಲಿ ನೀಡಲಾಗುತ್ತದೆ. |

**ಸಂಖ್ಯೆ: ಕಂಇ 222 ಎಸ್‌ಎಸ್‌ಸಿ 2023**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು

LCQ 1096

## ಅನುಬಂಧ-1

## ಗ್ರಾಮ ಠಾಣಾ ಗಡಿಯನ್ನು ಪುನರ್ ನಿಗಧಿಪಡಿಸಲಾಗಿರುವ ಮತ್ತು ಈ ಸಂಬಂಧ ಸರ್ವೆ ಕಾರ್ಯ ಪ್ರಗತಿಯಲ್ಲಿರುವ ಜಿಲ್ಲಾವಾರು ವಿವರ

| ಕ್ರ. ಸಂ. | ಜಿಲ್ಲೆ | ಗ್ರಾಮ ಠಾಣಾ ವಿಸ್ತರಣೆಗೆ (ಪುನರ್ ನಿಗಧಿ) ಗುರ್ತಿಸಿರುವ ಒಟ್ಟು ಗ್ರಾಮಗಳ ಸಂಖ್ಯೆ | ಗ್ರಾಮ ಠಾಣಾ ವಿಸ್ತರಣೆ (ಪುನರ್ ನಿಗಧಿ) ಅಳತೆ ಪೂರ್ಣಗೊಂಡ ಗ್ರಾಮಗಳ ಸಂಖ್ಯೆ | ಗ್ರಾಮ ಠಾಣಾ ವಿಸ್ತರಣೆ (ಪುನರ್ ನಿಗಧಿ) ಅಳತೆ ಕಾರ್ಯ ಪ್ರಗತಿಯಲ್ಲಿರುವ ಗ್ರಾಮಗಳ ಸಂಖ್ಯೆ |
|---|---|---|---|---|
| 1 | ಚಿಕ್ಕಬಳ್ಳಾಪುರ | 86 | 86 | 0 |
| 2 | ಚಿತ್ರದುರ್ಗ | 0 | 0 | 0 |
| 3 | ತುಮಕೂರು | 0 | 0 | 0 |
| 4 | ದಾವಣಗೆರೆ | 0 | 0 | 0 |
| 5 | ಬೆಂಗಳೂರು ಗ್ರಾಮಾಂತರ | 0 | 0 | 0 |
| 6 | ಬೆಂಗಳೂರು ಜಿಲ್ಲೆ | 0 | 0 | 0 |
| 7 | ಶಿವಮೊಗ್ಗ | 0 | 0 | 0 |
| 8 | ಕೋಲಾರ | 0 | 0 | 0 |
| 9 | ರಾಮನಗರ | 0 | 0 | 0 |
| 10 | ಉಡುಪಿ | 0 | 0 | 0 |
| 11 | ಕೊಡಗು | 0 | 0 | 0 |
| 12 | ಚಿಕ್ಕಮಗಳೂರು | 0 | 0 | 0 |
| 13 | ಚಾಮರಾಜನಗರ | 0 | 0 | 0 |
| 14 | ದಕ್ಷಿಣ ಕನ್ನಡ | 0 | 0 | 0 |
| 15 | ಮಂಡ್ಯ | 0 | 0 | 0 |
| 16 | ಮೈಸೂರು | 0 | 0 | 0 |
| 17 | ಹಾಸನ | 0 | 0 | 0 |
| 18 | ಉತ್ತರಕನ್ನಡ | 16 | 11 | 5 |
| 19 | ಗದಗ | 0 | 0 | 0 |
| 20 | ಧಾರವಾಡ | 0 | 0 | 0 |
| 21 | ಬಿಜಾಪುರ | 0 | 0 | 0 |
| 22 | ಬೆಳಗಾವ | 0 | 0 | 0 |
| 23 | ಬಾಗಲಕೋಟೆ | 0 | 0 | 0 |
| 24 | ಹಾವೇರಿ | 0 | 0 | 0 |
| 25 | ಕೊಪ್ಪಳ | 0 | 0 | 0 |
| 26 | ಗುಲ್ಬರ್ಗ | 0 | 0 | 0 |
| 27 | ಬೀದರ್ | 0 | 0 | 0 |
| 28 | ಯಾದಗಿರ್ | 0 | 0 | 0 |
| 29 | ರಾಯಚೂರು | 0 | 0 | 0 |
| 30 | ವಿಜಯನಗರ | 0 | 0 | 0 |
| 31 | ಬಳ್ಳಾರಿ | 2 | 0 | 2 |
| | **ಒಟ್ಟು** | **104** | **97** | **7** |